ನೆಲಸಮವಾಗಿ ಹೋಗಿದೆ. ನೀನು ನಿನ್ನ ತಂದೆತಾಯಿಯವರೊಂದಿಗೆ ನಿನ್ನ ಬಾಲ್ಯದ ಸವಿದಿನಗಳನ್ನು ಕಳೆದಿದ್ದೀ. ಬೇರೆಯವರ ಮನೆಯ ಧ್ವಂಸ ನೋಡಿ ನೀನೆಷ್ಟು ಬೇಸರಪಟ್ಟುಕೊಳ್ಳುತ್ತಿ; ಇದೇ ಜಗತ್ತಿನ ನಿಯಮ ಕಣಮ್ಮ.'

ಮಗಳ ಬಾಯಿಯಿಂದ ಹೊರಟ ಈ ಕಠೋರ ಸತ್ಯದ ಮಾತುಗಳನ್ನು ಕೇಳಿ ಸುಷಮಾ ಯೋಚನೆಯಲ್ಲಿ ಮುಳುಗಿ ಹೋದಳು. ಒಂದೊಮ್ಮೆ ಮಾರ್ಕ್ ಒಳ್ಳೆಯ ಮನುಷ್ಯನಾಗಿದ್ದರೆ ಅವನು ತನ್ನೊಳಗೆ ರಿಚಿ ಆಂಟಿಯ ಸುಂದರತೆಯನ್ನು ಮನಗಾಣುತ್ತಿರಲಿಲ್ಲವೆ? ರಿಚಿ ಆಂಟಿ ಅವನಿಗೆ ಅಲ್ಲಿ ಸಿಗುತ್ತಾಳೆಯೆ? ಅವರಿಬ್ಬರು ಆನಂದ ಮತ್ತು ವಿಷಾದದ ಪ್ರತಿಮೂರ್ತಿಗಳಾಗಿ ಅವಳ ಅಂತರ್‌ಮನದಲ್ಲಿ ಗಟ್ಟಿಯಾಗಿ ನೆಲೆಯೂರಿದ್ದಾರೆ. ಅವರನ್ನು ಹೊರಗೆ ಹುಡುಕುವುದು ಎಂದೂ ಸಾಧ್ಯವಿಲ್ಲ. ಜಗತ್ತಿನ ಈ ಸತ್ಯ ಗೊತ್ತಿದ್ದರೂ ಸುಷಮಾಳ ಭಾವ ಬಂಧುರ ಮನಸ್ಸು ಈಗಲೂ ಅದೇ ಮನೆ, ಅದೇ ಉದ್ಯಾನ ಅವೇ ಕೆಂಪು, ನೀಲಿ, ಹಳದಿ ಗಾಜು ಜಡಿತ ಬಾಗಿಲುಗಳು, ನಕ್ಷೆಯಿಂದ ಕೂಡಿದ ಕಿಟಕಿಗಳು ಬೆಲ್ಜಿಯಂ ಗಾಜಿನ ಇಳಿದೀಪ ಗೊಂಚಲುಗಳು, ಬೋನ ಚೈನಾದ ಕಪ್– ಸಾಸರ್‌ಗಳು, ಮೊನೋಗ್ರಾಮ ಜಡಿತ ಬೆಳ್ಳಿಯ ದೊಡ್ಡ ದೊಡ್ಡ ಚಮಚೆಗಳು, ಚಿಕ್ಕ ಚಿಕ್ಕ ಸಿಲ್ವರ್ ಟೀ ಸ್ಪೂನ್‌ಗಳು, ಪಿಯಾನೊ ಸ್ವರ ಆರ್ಗನ್ನಿನ ಮ್ಯೂಸಿಕ್ಕಿನೊಂದಿಗೆ 'ಕೆ ಸೇರಾ ರಾ...' ಎಂಬ ಇಂಪಾದ ಸ್ವರ ಹುಡುಕುತ್ತಿರುತ್ತದೆ. ಅವಳು ತುಂಬ ಭಾವುಕಳಿದ್ದಾಳೆಂದು ಅವಳ ಮಗಳು ಹೇಳುವುದು ನಿಜವೆ? ಯಾರಿಗೆ ಗೊತ್ತು?... ಇದ್ದರೂ ಇರಬಹುದು.

## ದೀಪ್ತಿ ಪಟನಾಯಕ್

ಒಡಿಯಾ ಭಾಷೆಯ ಬಹುಮುಖ್ಯ ಲೇಖಕಿ. ತಮ್ಮ ಕತೆ, ಕಾದಂಬರಿ, ಅನುವಾದಗಳಿಂದ ಒಡಿಯಾ ಭಾಷೆಯ ಓದುಗರು ಮತ್ತು ಸಾಹಿತ್ಯದ ಮೇಲೆ ವಿಶಿಷ್ಟ ಛಾಪನ್ನು ಒತ್ತಿದ್ದಾರೆ. ಪ್ರಸ್ತುತ ಒಡಿಶಾದ ಕಟಕ್‌ನಲ್ಲಿ ನೆಲೆಸಿರುವ ದೀಪ್ತಿ 10 ಕಥಾಸಂಗ್ರಹ, ಮೂರು ಜೀವನ ಚರಿತ್ರೆ, ಒಂದು ಕಾದಂಬರಿಯನ್ನು, ರವೀಂದ್ರನಾಥ ಟ್ಯಾಗೋರ್, ಮಹಾಶ್ವೇತಾ ದೇವಿ, ವಿಭೂತಿಭೂಷಣ ಮುಖ್ಯೋಪಧ್ಯಾಯರಂತಹ ಪ್ರಮುಖ ಲೇಖಕರೂ ಸೇರಿದಂತೆ ಅನೇಕ ಬಂಗಾಳಿ ಭಾಷೆಯ ಬರಹಗಾರ ಬರಹಗಳನ್ನು ಒಡಿಯಾಗೆ ಅನುವಾದಿಸಿದ್ದಾರೆ. ವಿಜ್ಞಾನ ಕ್ಷೇತ್ರದಲ್ಲೂ ದೀಪ್ತಿ ಕೆಲಸ ಮಾಡಿದ್ದಾರೆ. ನ್ಯೂಕ್ಲಿಯರ್ ಕೆಮಿಸ್ಟ್ರಿಯಲ್ಲಿ ಪಿಎಚ್.ಡಿ. ಪದವಿ ಪಡೆದಿರುವ ಅವರು ಈ ವಿಷಯದ ಕುರಿತಂತೆ ಲೇಖನಗಳನ್ನು, ಜನಪ್ರಿಯ ವಿಜ್ಞಾನದ ಬಗ್ಗೆ ಪುಸ್ತಕಗಳ ಸರಣಿಗಳನ್ನು ಪ್ರಕಟಿಸಿದ್ದಾರೆ.

## ಶಾ.ಮಂ. ಕೃಷ್ಣರಾಯ

ಲೇಖಕ, ಪತ್ರಕರ್ತ ಶಾ.ಮಂ. ಕೃಷ್ಣರಾಯರು ಮೈಸೂರು ವಿಶ್ವವಿದ್ಯಾಲಯದ ಬಿ.ಎಡ್., ಎಂ.ಎ. ಪದವಿ ಪಡೆದು ದಶಕಗಳ ಕಾಲ ಗೋವೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ನಾಟಕ, ಕತೆ, ಮಕ್ಕಳ ಸಾಹಿತ್ಯ, ಪ್ರವಾಸ ಕಥನ, ವ್ಯಕ್ತಿಚಿತ್ರ, ಜೀವನ ಚರಿತ್ರೆ, ಸಂಪಾದನೆ ಹಾಗೂ ಅನುವಾದ ಪ್ರಕಾರಗಳಲ್ಲಿ 90ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರು ಕೊಂಕಣಿ, ಮರಾಠೀ ಭಾಷೆಗಳ ಕೆಲವು ಅತ್ಯುತ್ತಮ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.